ಕಾನೂನು ಬಾಹಿರ ಮದ್ಯ ಮಾರಾಟ

1408(1204); ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)

ಅ) ಕರ್ನಾಟಕ ಅಬಕಾರಿ ನಿಯಮಗಳು 1967ರ ನಿಯಮ 21ರಡಿಯಲ್ಲಿ ಓರ್ವ ವ್ಯಕ್ತಿಯು ಪರವಾನಗಿ ಇಲ್ಲದೆ ಹೊಂದಬಹುದಾದ ಹಾಗೂ ಸಾಗಿಸಬಹುದಾದ ಮದ್ಯದ ಪ್ರಮಾಣವೆಷ್ಟು;

ಆ) ರಾಜ್ಯದಲ್ಲಿ ಸದರಿ ನಿಯಮ ಉಲ್ಲಂಘನೆಯಿಂದ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು;

ಇ) ಸದರಿ ನಿಯಮಯಡಿಯಲ್ಲಿ ಮದ್ಯ ಶೇಖರಿಸಿಡಲು ಅವಕಾಶ ನೀಡಿರುವುದರಿಂದ, ಕಾನೂನು ಬಾಹಿರ ಮಾರಾಟ ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸತೀಶ ಲಕ್ಷ್ಮಣ ಜಾರಕಿಹೊಳಿ (ಅಬಕಾರಿ ಸಚಿವರು)

ಅ) ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾದೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಾವಳಿಗಳು, 1967ರ ನಿಯಮ 21ರಲ್ಲಿ ಓರ್ವ ವ್ಯಕ್ತಿಯು ಪರವಾನಗಿ ಇಲ್ಲದೆ ಹೊಂದಬಹುದಾದ ಹಾಗೂ ಸಾಗಿಸಬಹುದಾದ ಮದ್ಯದ ಪ್ರಮಾಣವನ್ನು ನಿಗದಿಪಡಿಸಿದ್ದು, ನಿಗದಿಪಡಿಸಿದ ಪ್ರಮಾಣವು ಈ ಕೆಳಕಂಡಂತಿರುತ್ತದೆ.

ಮದ್ಯ	ಪ್ರಮಾಣ
ಬೀರ್	18 2 ಲೀ.
ಕರ್ನಾಟಕ ರಾಜ್ಯದಲ್ಲಿ ತಯಾರಾದ ಅಥವಾ ದೇಶದ ಇತರೆ ಪ್ರದೇಶಗಳಲ್ಲಿ ತಯಾರಾಗಿ ಕರ್ನಾಟಕ ರಾಜ್ಯಕ್ಕೆ ಆಮದು ಮಾಡಲಾದ ಬ್ರಾಂದಿ, ವಿಸ್ಕಿ, ಜಿನ್, ರಮ್, ಮಿಲ್ಕ್ ಪಂಚ್ ಮತ್ತು ಇತರೆ ಮದ್ಯಗಳು. (ಆಮದು ಮಾಡಲಾದ ವಿದೇಶಿ ಮದ್ಯಗಳನ್ನು ಹೊರತುಪಡಿಸಿ)	4.6 ಲೀ.
ಆಮದಾದ ವಿದೇಶಿ ಮದ್ಯ	91 ಲೀ
ವೈನ್‌ಗಳ (ಮಾಸ್ ವೈನ್ ಸ್ಯಾಕ್ರಿಮಂಟಲ್ ವೈನ್‌ಗಳನ್ನು ಸೇರಿದಂ ತೆ)	9.0 ಲೀ
ಫೋರ್ಟಿಫೈಡ್ ವೈನ್	4.5 ಲೀ.

ಆ) ಒಬ್ಬ ವ್ಯಕ್ತಿಯು ಕಾನೂನುಬದ್ದವಾಗಿ ಹೊಂದಿರಬಹುದಾದಂತಹ ಮದ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವಂತಹ ಪ್ರಕರಣಗಳು ಪೆಟ್ಟಿಗೆ ಅಂಗಡಿಗಳು, ಡಾಬಗಳಲ್ಲಿ ಹಾಗೂ ಕಿರಾಣಿ ಅಂಗಡಿಗಳಲ್ಲಿ ಕಂಡು ಬರುತ್ತಿದ್ದು ಇಂತಹ ಮದ್ಯವು ಪಾವತಿಸಬೇಕಾದ ಸುಂಕ ಹಾಗೂ ಹೆಚ್ಚುವರಿ ಸುಂಕಗಳನ್ನು ಮುಂಗಡವಾಗಿ ಪಾವತಿಸಿದ ನಂತರ ರಾಜ್ಯದ ಏಕೈಕ ಸರ್ಕಾರಿ ಸ್ವಾಮ್ಯದ ಮದ್ಯ ವಿತರಣಾ ಘಟಕವಾದ ಕರ್ನಾಟಕ ರಾಜ್ಯ ಪಾನೀಯ ನಿಗಮದ ನಿಗಧಿತ ಡಿಪೋಗಳಿಂದ ಸರಬರಾಜಾಗಿ ಅಧಿಕೃತ ಮದ್ಯ ಮಾರಾಟ ಮಳಿಗೆಗಳಿಂದ ಮಾರಾಟವಾಗುತ್ತಿದ್ದು ಇದರಿಂದ ಸರ್ಕಾರಕ್ಕೆ ಯಾವುದೇ ರಾಜಸ್ವ ನಷ್ಟ ಉಂಟಾಗಿರುವುದಿಲ್ಲ.

ಅನಧಿಕೃತ ಸ್ಥಳಗಳಲ್ಲಿ ಮದ್ಯ ಸೇವನೆಗೆ ಅವಕಾಶ ಮಾಡಿಕೊಟ್ಟಿರುವವರ ವಿರುದ್ಧ ಅಬಕಾರಿ ಕಾಯ್ದೆ 1965 ರ ಕಲಂ 15(ಎ) ಅಡಿಯಲ್ಲಿ 2014–15ನೇ ಸಾಲಿಗೆ ಏಪ್ರಿಲ್–2014 ರಿಂದ ಡಿಸೆಂಬರ್–2014 ರವರೆಗೆ 5008 ಮೊಕದ್ದಮೆಗಳನ್ನು ದಾಖಲಿಸಿ, ದಂಡದ ರೂಪದಲ್ಲಿ ರೂ.76,43,750 ಗಳನ್ನು ವಸೂಲಿ ಮಾಡಿ ಸರ್ಕಾರಕ್ಕೆ ಸಂದಾಯ ಮಾಡಲಾಗಿರುತ್ತದೆ.

ಇ) ಅಕ್ರಮ ಮದ್ಯ ಮಾರಾಟ ಪ್ರಕರಣಗಳನ್ನು ತಡೆಗಟ್ಟಲು ಜನ ಜಾಗೃತಿ ಮೂಡಸಲು ಗ್ರಾಮ ಸಭೆ/ವಾರ್ಡ್ ಸಭೆಗಳನ್ನು ನಡೆಸುತ್ತಿದ್ದು, ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 50 ರಂತೆ ಹಾಗೂ ಅಬಕಾರಿ ಅಕ್ರಮಗಳನ್ನು ತಡೆಗಟ್ಟಲು ಸಾರ್ವಜನಿಕರ ಜವಾಬ್ದಾರಿ/ ಹೊಣೆಗಾರಿಕೆ ಬಗ್ಗೆ ಅರಿವು ಮೂಡುವಂತೆ ತಿಳುವಳಿಕೆ ಪತ್ರಗಳನ್ನು ಸಂಬಂಧಿಸಿದ ಎಲ್ಲರಿಗೂ ಜಾರಿ ಮಾಡಲಾಗುತ್ತಿದೆ. ಸನ್ನಿವೇತರ ಪ್ರದೇಶಗಳಲ್ಲಿ ಮದ್ಯ ಮಾರಾಟವಾಗುತ್ತಿರುವ ಬಗ್ಗೆ ಮೊಕದ್ದೆಮಗಳನ್ನು ದಾಖಲು ಮಾಡಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ.

ಅಲ್ಲದೆ, ಈ ಕುರಿತು ಪೊಲೀಸ್ ಇಲಾಖೆಯಲ್ಲಿ ಸ್ಥಾಪಿತವಾಗಿರುವ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ ಎಂಬ ವಿಶೇಷ ಘಟಕವೂ ಸಹ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 2 ತಿಂಗಳಿಗೊಮ್ಮೆ ನಡೆಯುತ್ತಿರುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ರಸ್ತೆ ಗಾವಲು, ರಾತ್ರಿ ಗಸ್ತು ಹಾಗೂ ಜಾರಿ ಕಾರ್ಯಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸುತ್ತೋಲೆ/ ಪತ್ರಗಳ ಮೂಲಕ ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಬಹುಗ್ರಾಮಗಳ ಕುಡಿಯುವ ನೀರು

1410(1663); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)

ಅ) ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿಗೆ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ಪ್ರಸ್ತಾವನೆಗೆ ಮಂಜೂರಾತಿ ನೀಡಲಾಗಿದೆ ಯೇ;

ಇ) ಮಂಜೂರಾತಿ ನೀಡಿದಲ್ಲಿ ಬಿಡುಗಡೆ ಮಾಡಲಾದ ಅನುದಾನದ ಮೊತ್ತ ಎಷ್ಟು;

ಈ) ಈ ಯೋಜನೆಯ ಕಾಮಗಾರಿಗಳನ್ನು ಯಾವ ಯಾವ ಗ್ರಾಮಗಳಲ್ಲಿ ಪ್ರಾರಂಭಿಸಲಾಗಿದೆ.

ಉ) ಪ್ರಾರಂಭಿಸಿದ ಕಾಮಗಾರಿಗಳು ಪೂರ್ಣಗೊಂಡಿವೆಯೇ?